**<u>ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.</u>**

**<u>ಓ.ಎಸ್. ನಂಃ49/2022</u> ಪಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **14.06.2024** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ **ಬಿ.ಎಸ್** ವಕೀಲರಿಂದಃ</u>

ನಾನು **10** ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು ವ್ಯವಸಾಯ ಮತ್ತು ಚಾಲಕನ್ನಾಗಿ ಕೆಲಸ ಮಾಡಿಕೊಂಡು ಇರುತ್ತೇನೆ. ನನ್ನ ತಂದೆಗೆ 4 ಗಂಡು ಮತ್ತು 3 ಹೆಣ್ಣು ಮಕ್ಕಳು. ನಾನು ಕಿರಿ ಮಗ. ನಾನು ಈಗ ಕೆಂಪಯ್ಯನಹುಂಡಿ ಗ್ರಾಮದಲ್ಲಿ ವಾಸ ಇರುತ್ತೇನೆ. ಸದರಿ ಗ್ರಾಮದಲ್ಲಿ ನಾನು ವಾಸ ಇರುವ ಬಗ್ಗೆ ನನ್ನ ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ನನ್ನ ತಂದೆಯ 4 ಜನ ಗಂಡು ಮಕ್ಕಳ ಪೈಕಿ ಇಬ್ಬರು ಸದರಿ ಊರಿನಲ್ಲಿ ವಾಸ ಇದ್ದು ಮತ್ತು ಇನ್ನು ಇಬ್ಬರು ಮೈಸೂರಿನಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಸದರಿ ಗ್ರಾಮದಲ್ಲೇ ವಾಸ ಇರುತ್ತೇನೆ, ಆದರೆ ನನ್ನ ಚಾಲಕ ವೃತ್ತಿಯ ಕೆಲಸದ ನಿಮಿತ್ತ ನಾನು ಮೈಸೂರಿಗೆ ಹೋಗಿ ಬಂದು ಮಾಡುತ್ತೇನೆ.

ಸದರಿ ದಾವಾ ಸ್ವತ್ತಿನೊಂದಿಗೆ ನೂರಾರು ಎಕರೆ ಸ್ವತ್ತು ಪ್ರಸನ್ನನಂಜುಂಡೇಶ್ವರ ಹೆಸರನಲ್ಲಿ ಇದೆ ಎಂದರೆ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ, ಆದರೆ ಸದರಿ ದಾವಾ ಸ್ವತ್ತು ಸದರಿ ಪ್ರಸನ್ನ ನಂಜುಂಡೇಶ್ವರ ದೇವಸ್ಥಾನದ ಹೆಸರನಲ್ಲಿ ಇರುತ್ತದೆ, ನನ್ನ ಅಜ್ಜ, ನನ್ನ ತಂದೆ ಮತ್ತು ನಾನು ಸದರಿ ದಾವಾ ಸ್ವತ್ತನ್ನು ಸುಮಾರು **50** ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬಂದಿರುತ್ತೇನೆ. ನನ್ನ ತಾತನ ಹೆಸರು ನರಸಿಂಹನಾಯಕ. ಸದರಿ ನನ್ನ ತಾತರವರಿಗೆ ಚೆಲುವನಾಯಕ ತಮ್ಮ. ನನ್ನ ತಾತನಿಗೆ ಮೂರು ಗಂಡು ಹಾಗೂ ಒಂದು ಹೆಣ್ಣು ಮಕ್ಕಳು. ನನ್ನ ತಾತನ ಮಕ್ಕಳ ಪೈಕಿ ನನ್ನ ತಂದೆ ಹಿರಿಯವರು, ಎರಡನೇಯವರು ಸಂಗನಾಯಕ ಮತ್ತು ಮೂರನೇಯವರು ಗುರುಬಸವನಾಯಕ. ಸದರಿ ದಾವಾ ಸ್ವತ್ತು ಹೊರತುಪಡಿಸಿ ನನ್ನ ತಂದೆ ಮತ್ತು ತಾತನವರಿಗೆ ಬೇರೆ ಆಸ್ತಿ ಇದೆ. ನನ್ನ ತಂದೆಯ

ಹೆಸನರಿನಲ್ಲಿದ್ದ ಸರ್ವೇ ನಂ.9, ವಿಸ್ತೀರ್ಣ 33 ಗುಂಟೆ ಜಮೀನು ಈಗ ನನ್ನ ಹೆಸರಿನಲ್ಲಿ ಇದೆ. ಸದರಿ ಸ್ವತ್ತು ಪಿತ್ರಾರ್ಜಿತವಾಗಿ ನನಗೆ ಬಂದಿರುತ್ತದೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪಾಲು ವಿಭಾಗವಾಗಿರುವುದಿಲ್ಲ. ಅದೇ ರೀತಿ ಸದರಿ ದಾವಾ ಸ್ವತ್ತು ಸಹ ನಮ್ಮ ಕುಟುಂಬದಲ್ಲಿ ಪಾಲು ವಿಭಾಗ ಆಗಬೇಕು ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ನಮ್ಮ ಕುಟುಂಬದವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ಸದರಿ ದಾವಾ ಸ್ವತ್ತಿನ ಚೆಕ್ಕುಬಂಧಿ ತಿಳಿದಿದೆ. ಪೂರ್ವಕ್ಕೆ ಕಪನಿಗೌಡರವರ ಸ್ವತ್ತು, ಪಶ್ಚಿಮಕ್ಕೆ ನಾಗೇಗೌಡರವರ ಸ್ವತ್ತು, ಉತ್ತರಕ್ಕೆ ಜವನೇಗೌಡರವರ ಸ್ವತ್ತು, ದಕ್ಷಿಣಕ್ಕೆ ಚೌಡೇಗೌಡರವರ ಸ್ವತ್ತು ಇದೆ. ಸದರಿ ಪ್ರತಿವಾದಿಯವರ ಸ್ವತ್ತು. ದಾವಾ ಸ್ವತ್ತಿನ ಉತ್ತರಕ್ಕೆ ಮತ್ತು ಪಶ್ಚಿಮಕ್ಕೆ ಬರುತ್ತದೆ. ಸದರಿ ಪ್ರತಿವಾದಿಯವರು ದಾವಾ ಸ್ವತ್ತಿನ ಪೈಕಿ ವಿಸ್ತೀರ್ಣ 31 ಗುಂಟೆ ಜಾಗವನ್ನು ಅವರ ತಂದೆಯ ಕಾಲದಿಂದಲೂ ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸದರಿ 31 ಗುಂಟೆ ಜಮೀನನ್ನು ಸದರಿ ಪ್ರತಿವಾದಿಯವರು ನನ್ನ ತಂದೆಯ ಕಾಲದಿಂದಲೂ ಯಾವುದೇ ತಂಟೆ ತಕರಾರು ಇಲ್ಲದೇ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದ ಸದರಿ ಪ್ರತಿವಾದಿಯವರು ಸದರಿ ದಾವಾ ಸ್ವತ್ತಿನ ಸ್ವಾಧೀನಕ್ಕೆ ಯಾವತ್ತಿಗೂ ಬಂದಿರುವುದಿಲ್ಲ ಮತ್ತು ಸದರಿ ದಾವಾ ಸ್ವತ್ತನ್ನು ನಾನು ಮತ್ತು ನನ್ನ ಕುಟುಂಬದವರೇ ಇವತ್ತಿನವರೆಗೂ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಬಂದಿರುತ್ತೇವೆ.

ಸದರಿ ಪ್ರಸನ್ನ ನಂಜುಂಡೇಶ್ವರ ದೇವಸ್ಥಾನ ನೂರಾರು ಎಕರೆ ಜಮೀನಿನ ಪೈಕಿ ವ್ಯವಸಾಯ ಮಾಡುತ್ತಿದವರು ಸರ್ಕಾರಕ್ಕೆ ಅರ್ಜಿ ಸಲ್ಲಿಸಿ, ಅವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ನಾನು ಅಥವಾ ನಮ್ಮ ಕುಟುಂಬದವರು ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಹೆಸರಿಗೆ ಮಾಡಿಕೊಳ್ಳಲು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದೀರಾ ಎಂದರೆ ಇಲ್ಲ. ಸದರಿ ಪ್ರತಿವಾದಿಯವರು ಆಗಸ್ಟ-2021 ರಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಜೊತೆ ತಕರಾರು ಮಾಡಿರುತ್ತಾರೆ. ಸದರಿ ತಕರಾರು

ವಿಚಾರವಾಗಿ ದಾವಾ ಸ್ವತ್ತಿನ ಜಮೀನಿನ ಹತ್ತಿರ ಪಂಚಾಯತಿ ಆಗಿದ್ದು, ಪಂಚರಾದ ನಾಗೇಗೌಡ ಬಿನ್ ಸಣ್ಣೇಗೌಡ, ಜವನೇಗೌಡ ಮತ್ತು ಪುಟ್ಟನಾಯಕರವರು ಹಾಜರಿದ್ದರು. ಸದರಿ ಪಂಚಾಯತಿಯಲ್ಲಿ ಮೊದಲಿನಿಂದಲೂ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಮತ್ತು ನನ್ನ ಕುಟುಂಬದವರೇ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರಿಂದ ನಮಗೆ ವ್ಯವಸಾಯವನ್ನು ಮುಂದುವರೆಸಲು ತಿಳಿಸಿ, ಸದರಿ ಪ್ರತಿವಾದಿಯವರಿಗೆ ಸದರಿ ದಾವಾ ಸ್ವತ್ತಿನ ಸ್ವಾಧೀನದ ತಂಟೆಗೆ ಬರಬಾರದೆಂದು ಬುದ್ದಿವಾದ ಹೇಳಿರುತ್ತಾರೆ. ಸದರಿ ಪಂಚಾಯತಿಯ ಆದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತವಾದ ಸಾಕ್ಷಿ ಇರುವುದಿಲ್ಲ. ಸದರಿ ಪಂಚರನ್ನು ಸಾಕ್ಷಿ ಮಾಡಿಸಲು ನನಗೆ ತೊಂದರೆ ಇರುವುದಿಲ್ಲ. ಸದರಿ ಪಂಚರ ಪೈಕಿ ಪ್ರತಿವಾದಿರವರ ಜಾತಿಗೆ ಸೇರಿದವರು ಇರಲಿಲ್ಲ. ಸದರಿ ಪಂಚರ ಪೈಕಿ ಒಬ್ಬ ಪಂಚರು ನನ್ನ ಜಾತಿಗೆ ಸೇರಿದವರು ಮತ್ತು ಇಬ್ಬರು ಗೌಡರ ಜಾತಿಗೆ ಸೇರಿರುತ್ತಾರೆ. ಸದರಿ ಪ್ರತಿವಾದಿರವರ ಜಾತಿಯ ಮುಖಂಡರನ್ನು ಸದರಿ ಪಂಚಾಯತಿಗೆ ಪಂಚರನ್ನಾಗಿ ಬರಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಸದರಿ ಮಾತುಕತೆ ಆತುರವಾಗಿ ಜರುಗಿದ್ದರಿಂದ ಸದರಿ ಪ್ರತಿವಾದಿಯವರ ಜಾತಿಯ ಮುಖಂಡರನ್ನು ಬರಮಾಡಿಕೊಳ್ಳಲು ಆಗಿರುವುದಿಲ್ಲ. ಸದರಿ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಪರಿಶಿಷ್ಟ ಜಾತಿಗೆ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಯವರ ಜಾತಿಯ ಮುಖಂಡರವರನ್ನು ಸದರಿ ಪಂಚಾಯತಿಗೆ ಕರೆದರೆ ಜಗಳ ಆಗುತ್ತದೆ ಎಂದು ನಾನು ಸದರಿಯವರನ್ನು ಪಂಚರನ್ನಾಗಿ ಬರಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಪ್ರತಿವಾದಿಯ ತಂದೆಯವರು ಸದರಿ ದಾವಾ ಸ್ವತ್ತಿನ ಪೈಕಿ ವಿಸ್ತೀರ್ಣ 31 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡಿರುವುದಾಗಿ ಸರ್ಕಾರದಿಂದ ಮಂಜೂರು ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾ ಸ್ವತ್ತಿನ ಪೈಕಿ ನಾನು 1 ಎಕರೆ 20 ಗುಂಟೆ ವ್ಯವಸಾಯ ಮಾಡಿಕೊಂಡಿರುತ್ತೇನೆ ಮತ್ತು ಉಳಿದ 31 ಗುಂಟೆ ಪ್ರತಿವಾದಿಯವರು ವ್ಯವಸಾಯ ಮಾಡಿಕೊಂಡು ಇರುತ್ತಾರೆ ಎಂದರೆ ಸಂಪೂರ್ಣ ದಾವಾ ಸ್ವತ್ತನ್ನು ನಾನೇ

ವ್ಯವಸಾಯ ಮಾಡಿಕೊಂಡು ಇರುತ್ತೇನೆ. ಸದರಿ ಪ್ರತಿವಾದಿಯವರ ಸ್ವಾಧೀನದಲ್ಲಿರುವ ಸದರಿ 31 ಗುಂಟೆ ಜಮೀನಿನಲ್ಲಿ ಪ್ರತಿವಾದಿಯವರು ಭತ್ತ ಬೆಳೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಆ ರೀತಿ ಭತ್ತ ಬೆಳೆ ಬೆಳೆದಿದ್ದರಿಂದ ನಾನು ತಾಲ್ಲೂಕು ಕಛೇರಿಯಲ್ಲಿ ಸದರಿ ಪ್ರತಿವಾದಿಯವರ ವಿರುದ್ಧ ತಹಶೀಲ್ದಾರವರಿಗೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಮತ್ತು ಪ್ರತಿವಾದಿಯ ನಡುವೆ ಸಣ್ಣಪುಟ್ಟ ತಂಟೆ ತಕರಾರು ಆಗಿದ್ದು, ಆಗಸ್ಟ್ ತಿಂಗಳ 2021 ರಲ್ಲಿ ನಾನು ಪ್ರತಿವಾದಿಯ ಮೇಲೆ ತಿ.ನರಸೀಪುರ ಪೊಲೀಸ ಠಾಣೆಗೆ ಮತ್ತು ಎಸ್.ಪಿ ಕಛೇರಿಗೆ ದೂರು ನೀಡಿರುತ್ತೇನೆ. ಸದರಿ ಠಾಣೆಯಲ್ಲಿ ಪೋಲಿಸರವರು ಪ್ರತಿವಾದಿಯವರಿಗೆ ಬುದ್ಧಿ ಹೇಳಿ ಸದರಿ ದಾವಾ ಸ್ವತ್ತಿನ ತಂಟೆಗೆ ಹೋಗಬಾರದೆಂದು ಹೇಳಿ ಬರವಣಿಗೆ ಮಾಡಿಸಿಕೊಂಡಿರುತ್ತಾರೆ. ಸದರಿ ಬರವಣಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಠಾಣೆಯ ವಿಚಾರಣೆಯಲ್ಲಿ ಪ್ರತಿವಾದಿಯವರು ಸದರಿ ದಾವಾ ಸ್ವತ್ತಿನ ಪೈಕಿ 31 ಗುಂಟೆ ಸ್ವಾಧೀನ ಇರುವ ಬಗ್ಗೆ ಮತ್ತು ನಾನು ಸದರಿ ದಾವಾ ಸ್ವತ್ತಿನ ಪೈಕಿ 1 ಎಕರೆ 20 ಗುಂಟೆ ಸ್ವಾಧೀನ ಹೊಂದಿರುವ ಬಗ್ಗೆ ಹೇಳಿಕೆ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಆ ದಿನ ಠಾಣೆಯ ವಿಚಾರಣೆಯಲ್ಲಿ ನಾನು ಸದರಿ 31 ಗುಂಟೆ ಜಮೀನು ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಮತ್ತು ಉಳಿದ 1 ಎಕರೆ 20 ಗುಂಟೆ ನನ್ನ ಸ್ವಾಧೀನದಲ್ಲಿ ಇರುತ್ತದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಸದರಿ ಪ್ರತಿವಾದಿಯವರು ಪರಿಶಿಷ್ಟ ಜಾತಿಗೆ ಸೇರಿದ್ದರಿಂದ ಸದರಿಯವರಿಗೆ ಕಿರುಕುಳ ಕೊಡುವ ಸಲುವಾಗಿ ಮತ್ತು ಸದರಿಯವರು ಸ್ವಾಧೀನ ಹೊಂದಿರುವ ಸದರಿ 31 ಗುಂಟೆ ಸ್ವತ್ತನ್ನು ಲಪಟಾಯಿಸುವ ಸಲುವಾಗಿ ನಾನು ಮತ್ತು ನಮ್ಮ ಕೋಮಿನವರು ಮತ್ತು ಬೇರೆ ಕೋಮಿನವರು ಸೇರಿಕೊಂಡು ಸದರಿ ದಾವೆಯನ್ನು ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 30 ವರ್ಷದಿಂದ ಮೈಸೂರಿನಲ್ಲೇ ವಾಸ

ಇರುತ್ತೇನೆ, ದಾವಾ ಸ್ವತ್ತಿಗೆ ಯಾವತ್ತಿಗೂ ನಾನು ಬಂದಿರುವುದಿಲ್ಲ ಮತ್ತು ಸದರಿ ಪ್ರತಿವಾದಿಯವರು ಸ್ವಾಧೀನ ಇರುವ 31 ಗುಂಟೆ ಜಮೀನನ್ನು ಲಪಟಾಯಿಸು ಸಲುವಾಗಿ ಸದರಿ ದಾವಾ ಸ್ವತ್ತಿನ ಸ್ವಾಧೀನವನ್ನು ನಾನು ಹೊಂದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತಿನ ಪೈಕಿ 31 ಗುಂಟೆ ಜಮೀನಿನಲ್ಲಿ ಈಗಲೂ ಪ್ರತಿವಾದಿಯವರು ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಇರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯತಿ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ಶ್ರೀ **ಬಿ.ಎಸ್** ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**

O.S No.49/2022

Counsel for both parties present.

Counsel for defendant paid cost of Rs.500/- to counsel for plaintiff.

For cross of PW.1, PW.1 present and cross examined by counsel for defendant and for further cross of PW.1, prays time.

For further cross of PW.1.

Call on 03.08.2024.

**Civil Judge and JMFC.,**
**T.Narasipura.**